ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.416/2023,

ಚಾಸಾ- 2, ಫ್ರಾಸಾ -2

| | |
|---|---|
| ಹೆಸರು | ಸತೀಶ್ ಕೆ. |
| ತಂದೆಯ ಹೆಸರು | ಕೆಂಪರಾಮಯ್ಯ ಬಿ.ವಿ |
| ವಯಸ್ಸು | 40 ವರ್ಷ |
| ಕೆಲಸ | ಸರ್ವೇಯರ್ , ಎ.ಡಿ.ಎಲ್.ಆರ್, ಮೂಡಬಿದ್ರೆ |
| ವಾಸ | ಅಲಂಗಾರು , ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 30-07-2024 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ನಾನು 2018 ರಿಂದ ಇಲ್ಲಿಯವರೆಗೂ ಮೂಡಬಿದ್ರೆಯ ತಹಶೀಲ್ದಾರ್ ಕಚೇರಿಯಲ್ಲಿ ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ಚಾಸಾ-1 , ಚಾಸಾ-3 ಮತ್ತು ಚಾಸಾ-4 ಗೊತ್ತು . 1 ಮತ್ತು 3 ನೇ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆನು . ದಿಃ 06-10-2023 ರಂದು ಸುಮಾರು 11-00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ನಾನು ತಹಶೀಲ್ದಾರ್ ರವರ ಆದೇಶದ ಮೇರೆಗೆ ಹೊಸಬೆಟ್ಟು ಗ್ರಾಮದ ಸರ್ವೇನಂ. 198/1 ರಲ್ಲಿ ಸರ್ಕಾರಿ ಸ್ಥಳವನ್ನು ಅಳತೆ ಮಾಡಲು ಹೋಗಿರುತ್ತೇವೆ . ಆಗ ಸ್ಥಳದಲ್ಲಿ ಯಾರು ಇರಲಿಲ್ಲ . ನಂತರ ಚಾಸಾ-1 ರವರು ದೂರವಾಣಿ ಮೂಲಕ ಕರೆ ಮಾಡಿ ಆರೋಪಿತರನ್ನು ಸ್ಥಳಕ್ಕೆ ಕರೆಸಿರುತ್ತಾರೆ .

ನಂತರ ಸರ್ಕಾರಿ ಸ್ಥಳವನ್ನು ಅಳತೆ ಮಾಡಲು ಪಟ್ಟಾ ಜಾಗದಿಂದ ಬರಬೇಕಾಗಿತ್ತು . ಅಳತೆ ಮಾಡಲು ಆರೋಪಿತರು ಆಕ್ಷೇಪಣೆ ಮಾಡಿರುತ್ತಾರೆ .

2. ಚಾಸಾ-1 ರವರು ಸರ್ಕಾರಿ ಕೆಲಸ ಮಾಡಲು ಬಂದಿರುತ್ತೇವೆ , ಅಡ್ಡಿಯನ್ನುಂಟು ಮಾಡಬೇಡಿ ಎಂದು ಹೇಳಿರುತ್ತಾರೆ . 1ನೇ ಆರೋಪಿಯು ಒಂದು ಕಲ್ಲನ್ನು ತೆಗೆದುಕೊಂಡು ತನ್ನ ತಲೆಗೆ ಜಜ್ಜಿಕೊಂಡು , ಅಳತೆ ಮಾಡಲು ಬಿಡುವುದಿಲ್ಲವೆಂದು ಹೇಳಿರುತ್ತಾರೆ . ಹೀಗೆ ಅವರು ತಕರಾರು ತೆಗೆದ ಕಾರಣ ನಾವು ಅಳತೆ ಮಾಡಲು ಆಗಿರುವುದಿಲ್ಲ . ಈ ಬಗ್ಗೆ ಚಾಸಾ-1 ರವರು ಅದೇ ದಿನ ಪೊಲೀಸರಲ್ಲಿ ದೂರನ್ನು ದಾಖಲು ಮಾಡಿರುತ್ತಾರೆ . ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ಸರ್ಕಾರಿ ಜಮೀನನ್ನು ಅಳತೆ ಮಾಡಲು ಹೋದಾಗ ಕಿಶೋರ್ ಆಳ್ವಾರವರ ಪರಿಚಯವಾಗಿರುತ್ತದೆ. ಸದರಿಯವರು ಅದಾನಿ ಪವರ್ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ . ಸದರಿಯವರಿಗೆ ನಾನು ಅಳತೆ ಎಂದು ಹೋದ ಜಮೀನಿನ ಪಕ್ಕದಲ್ಲಿ ಸುಮಾರು 30 ಎಕರೆಯಷ್ಟು ಜಮೀನು ಇದೆ ಎಂದರೆ ಇರಬಹುದು. ಡಿಂಪಲ್ ರೈ ರವರು ಕಿಶೋರ್ ಆಳ್ವಾರವರ ಸಂಬಂಧಿಕರು ಎಂದರೆ ಹೌದು . ಸದರಿ ದಿನದಂದು ಡಿಂಪಲ್ ರೈರವರು ಸ್ಥಳದಲ್ಲಿ ಇದ್ದರೋ ಇಲ್ಲವೊ ಎಂದು ನನಗೆ ನೆನಪಿಲ್ಲ . ಕಿಶೋರ್ ಆಳ್ವಾರ ಜನ ಚಾಸಾ-5 ರವರು ಆ ದಿನ ಸ್ಥಳದಲ್ಲಿ ಇದ್ದರು .

2. ನಾವು ಅಳತೆ ಮಾಡುತ್ತಿದ್ದ ಸಮಯದಲ್ಲಿ ಕೂಲಿ ಕೆಲಸದವನು ಇದ್ದು , ಆತನ ಕೈಯಲ್ಲಿ ಒಂದು ಕತ್ತಿ ಇತ್ತು . ಕೂಲಿ ಕೆಲಸ ಮಾಡುತ್ತಿದ್ದವನ ಕೈಯಲ್ಲಿ ಇದ್ದ ಕತ್ತಿಯನ್ನು ಅವರ ಕೈಯಿಂದ



ಚಾಸಾ-1 ರವರು ಎಳೆದುಕೊಂಡಿರುತ್ತಾರೆ . ಆ ನಂತರ ಅದನ್ನು ಅವರು ತಮ್ಮ ಕಛೇರಿಗೆ ತೆಗೆದುಕೊಂಡು ಹೋಗಿರುತ್ತಾರೆ . ಈ ಎಲ್ಲಾ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ . ಅಳತೆ ಮಾಡಲು ಹೋದ ದಿನವೇ ನನ್ನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆ ಎಂದರೆ ಮಾರನೆ ದಿವಸ ವಿಚಾರಣೆ ಮಾಡಿರುತ್ತಾರೆ . ಆ ಕೂಲಿ ಕೆಲಸದವರು ಯಾರು ಎಂದು ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ಚಾಸಾ-1 ರವರು ಕಿಶೋರ್ ಆಳ್ವಾರವರ ಜೊತೆ ದೂರವಾಣಿಯಲ್ಲಿ ಮಾತನಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ದೂರವಾಣಿಯಲ್ಲಿ ಮಾತನಾಡಿದ ನಂತರ ಕತ್ತಿಯನ್ನು ಎಳೆದಿರುತ್ತಾರೆ ಎಂದರೆ ನನಗೆ ನೆನಪಿಲ್ಲ . ಕಿಶೋರ್ ಆಳ್ವಾರವರ ಒತ್ತಡಕ್ಕೆ ಮಣಿದು ಚಾಸಾ-1 ರವರು ಹಾಕಿದ ಸುಳ್ಳು ಪ್ರಕರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ